ಅ) ಭಿಕ್ಷಕರನ್ನು ಬಂಧಿಸುವುದರಲ್ಲಿ ಕಾನೂನು ತೊಡಕುಗಳಿವೆ ಎಂದು ಅದರ ಅಧ್ಯಕ್ಷರು ಹೇಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ಶಾಸನಕ್ಕೆ ಅನುಗುಣವಾಗಿ ಬಂಧಿತರಾದವರು ಬೇರೆ ರಾಜ್ಯಗಳಿಂದ ಬಂ ವರು ಶೇಕಡ ೭೦ ಕ್ಕೂ ಹೆಚ್ಚಿದ್ದಾರೆಯೇ ? ಹಾಗೂ ಅದರ ಅಂಕಿ ಅಂಶಗಳೇನು ?

ಈ) ಈ ಬಗ್ಗೆ ಸರ್ಕಾರದ ಧೋರಣೆಯೇನು ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ೧-೧ ೮೬ ರಿಂದ ೩೧-೧೨-೮೬ರ ವರೆಗೆ ಬಂಧಿಸಿದ ಸುಮಾರು ೨,೦೮೦ ಭಿಕ್ಷುಕರ ಅಂಕಿ ಅಂಶಗಳು ಈ ಕೆಳಕಂಡಂತೆ ಇವೆ.

೧.	ತಮಿಳುನಾಡು	—	೭೦೮
೨.	ಕೇರಳ	—	೧೦೦
೩.	ಆಂಧ್ರ ಪ್ರದೇಶ	—	೩೫೦
೪.	ಮಧ್ಯ ಪ್ರದೇಶ ಮತ್ತು ಇತರ ರಾಜ್ಯಗಳು	—	೩೫೦
೫	ಕರ್ನಾಟಕ	—	೫೦೦

ಈ) ಅಧಿನಿಯಮ ೨೨ರ ಪ್ರಕಾರ ಹೊರರಾಜ್ಯದಿಂದ ಬಂದಂತಹ ಭಿಕ್ಷಕರನ್ನು ಸಂಬಂಧಪಟ್ಟ ರಾಜ್ಯಗಳಿಂದ ಒಪ್ಪಿಗೆ ಪಡೆದಾದಮೇಲೆ ಆಯಾಯ ರಾಜ್ಯಗಳಿಗೆ ಹಿಂತಿರುಗಿಸಲು ಸಾಧ್ಯತೆ ಇರುತ್ತದೆ. ಇದನ್ನು ಜಾರಿಗೆ ತರುವುದೇ ಸರ್ಕಾರದ ಧೋರಣೆ.

ಶ್ರವಣ ಬೆಳಗೊಳ ದಿಗಂಬರ ಜೈನ ಮಂಜರಾಯಿ ಸಮಿತಿಯ 8 ಜನ ಸದಸ್ಯರ ನಿವೃತ್ತ ಅವಧಿಯ ಬಗ್ಗೆ.

ಶ್ರೀ. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

೧) ಶ್ರವಣಬೆಳಗೊಳ ದಿಗಂಬರ ಜೈನ ಮಂಜರಾಯಿ ಸಮಿತಿಯ ೮ ಜನ ಸದಸ್ಯರ ನಿವೃತ್ತ ಅವಧಿಯು ದಿನಾಂಕ ೩೧-೧೨-೮೫ ರಂದು ಕೊನೆಗೊಂಡಿತ್ತೇ?

೨) ಖಾಲಿಯಾದ ಸದಸ್ಯರ ಸಮಿತಿಯನ್ನು ಯಾವಾಗ ಪುನರ್ ರಚಿಸಿ ನೇಮಕ ಮಾಡಲಾಯಿತು?

೩) ಸಮಿತಿಗೆ ಸದಸ್ಯರನ್ನು ಯಾವ ಆಧಾರದ ಮೇಲೆ ಅನುಸರಿಸಿ ನೇಮಕ ಮಾಡಲಾಯಿತು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

೧) — ಹೌದು —

೨) ಸರ್ಕಾರದ ಅಧಿಸೂಚನೆ ಕ್ರಮಾಂಕ ಆ.ಡಿ ೮೬ ಎಂಇಟಿ ೮೬, ದಿನಾಂಕ ೪-೧೧-೧೯೮೬ರಲ್ಲಿ ಸಮಿತಿಯನ್ನು ಪುನರ್ ರಚನೆ ಮಾಡಿ ಆದೇಶ ಹೊರಡಿಸಲಾಗಿದೆ,

೩) ಎಸ್. ಡಿ. ಜೆ. ಎಂ. ಐ. ಶ್ರವಣಬೆಳಗೊಳ ೧೯೭೭ರ ನಿಯಮಾವಳಿ (೩)ರ ಪ್ರಕಾರ ಈ ಸಂಸ್ಥೆಯ ಸ್ವಾಮೀಜಿಯವರ ಶಿಫಾರಸ್ಸು ಮೇಲೆ ಗಣ್ಯವ್ಯಕ್ತಿಗಳನ್ನು ಸರ್ಕಾರವು ನೇಮಕ ಮಾಡಿದೆ.